ಮೈಸೂರ ಗಝೆಟ್ಟ.

ನಂ. 13 ಸರ್ಕಾರದಿಂದ ಫಾಯಿಷ್ ಆದ್ದು. ಸನ್ 1884.

ಬೆಂಗಳೂರು, ಶನಿವಾರ, ಮಾರ್ಚೀ ಶಾ॥ 29, ಸನ್ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಮಾಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರೆಟೆರಿಯವರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೆ ಬಕ್ಷೀರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷ್ಷ ಜಡ್ಜ್‌ರು, ಡಿ॥ ಡಿಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿವೋಟ್ಸ್‌ಗಳು; ಪೋಸ್ಟ್‌ಆಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 18ನೇ ಮಾರ್ಚೀ 1884.

ನಂ. 340—ಮೈಸೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಸಿ. ಪೊದಯ್ಯನವರಿಗೆ ಅವರು ಉಪಯೋಗಿಸಿಕೊಂಡ ತಾರೀ ಖುಲಗಾಯತು ವಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚ್ 1884.

ನಂ. 341.—1870ನೇ ಇಸವಿ ಕೋರ್ಟು ಫೀಜು ಆಕ್ಟಿನ 26–27—ವ 35ನೇ ಸೆಕ್ಷ್ಷಗಳಿಂದ ಕೊಡೋಣಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಮೈಸೂರು ಶ್ರೀಮ್ ಮಹಾರಾಜಾ ಸರ್ಕಾರದವರು ಸದರೀ ವಿಷಯಕ್ಕೆ ಸಂಬಂಧ ಪಟ್ಟ ಹಿಂದಿನ ತಮಾಂ ಇಸ್ತಿಹಾರ್‌ಗಳನ್ನು ರದ್ದುಪಡಿಸಿ ಇದರಡಿ ಬರುವ ನಿಬಂಧನೆಗಳನ್ನು ಹುಕ್ಕುಂ ಮಾಡುತ್ತಾರೆ;—

1. ಹತ್ತು ರೂಪಾಯಿಗಳಿಗೆ ವಳಪಟ್ಟ ಫೀಜು ಮೊಬಲಗಿನ ವಿಷಯದಲ್ಲಿ ಸದರೀ ಮೊಬಲಗು ಅಂಟಿಸಲ್ಪಡತಕ್ಕ್ ವಂದೇ ಸ್ಟ್ಯಾಂಪ್ ಮೂಲಕ ತೋರಿಸ ಬೇಕಾದಾಗ ಅಂಥಾ ಫೀಜು ಮೊಬಲಗು ಅವಶ್ಯಕವಾದ ಬೆಲೆಯುಳ್ಳ ಅಂಟಿಸಲ್ಪಡತಕ್ಕ ವಂದೇ ಸ್ಟ್ಯಾಂಪು ಮೂಲಕ ತೋರಿಸಲ್ಪಡತಕ್ಕದ್ದು ಆದರೆ ಸದರೀ ಮೊಬಲಗು ಅಂಟಿಸಲ್ಪಡತಕ್ಕ ವಂದೇ ಸ್ಟ್ಯಾಂಪ್ ಮೂಲಕ ತೋರಿಸಲ್ಪಡಲಿಕ್ಕೆ ಆಗದೆ ಇದ್ದರೂ

ಅಥವಾ ಅವಶ್ಯಕವಾದ ಜಲೆಯುಳ್ಳ ಅಂಟಿಸಲ್ಪಡತಕ್ಕ್ ವಂದೇ ಸ್ಟ್ಯಾಂಪ್ ದೊರೆಯದೆ ಇದ್ದರೂ ಅಂಥಾ ಸಂದರ್ಭದಲ್ಲಿ ದೊರಕುವಂಥಾ ಅದರ ಕೆಳಗಿನ ಕಮ್ಮೀದರದ ಸ್ಟ್ಯಾಂಪು ಪ್ರಯೋಗಿಸಲ್ಪಟ್ಟು, ಅವಶ್ಯಕವಾದ ಫೀಜ್ ಮೊಬಲಗಿನ ಕಂಭರ್ತೀ ಬಗ್ಯೆಅದಕ್ಕಿಂತಲೂ ಕಮ್ಮಿ ಜಲೆಯುಳ್ಳ ಅಂಟಿಸಲ್ಪಡತಕ್ಕ ವಂದು ಅಥವಾ ಹೆಚ್ಚು ಸ್ಟ್ಯಾಂಪುಗಳು ಪ್ರಯೋಗಿಸಲ್ಪಡತಕ್ಕದ್ದು.

2. ಹತ್ತು ರೂಪಾಯಿಗಳು ಯಾ ಅದಕ್ಕೆ ಮೇಲ್ಪಟ್ಟು ಫೀಜ್ ಮೊಬಲಗಿನ ವಿಷಯದಲ್ಲಿ ಸದರೀ ಮೊಬಲಗು ಖಚಿತ ಮಾಡಲ್ಪಟ್ಟ ವಂದೇ ಸ್ಟ್ಯಾಂಪು ಮೂಲಕ ತೋರಿಸಲ್ಪಡಬೇಕಾದಾಗ, ಸದರೀ ಫೀಜ್ ಮೊಬಲಗು ಅವಶ್ಯಕವಾದ ಜಲೆಯುಳ್ಳ ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪಿನ ಮೂಲಕ ತೋರಿಸಲ್ಪಡತಕ್ಕದ್ದು, ಆದರೆ ಸದರೀ ಮೊಬಲಗು ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪು ಮೂಲಕ ತೋರಿಸಲ್ಪಡಲಿಕ್ಕೆ ಆಗದೆ ಇದ್ದರೂ ಅಥವಾ ಅವಶ್ಯಕವಾದ ಕಿಮ್ಮತ್ತಿನ ಖಚಿತಮಾಡಲ್ಪಟ್ಟ ವಂದೇ ಸ್ಟ್ಯಾಂಪು ದೊರಕದಿದ್ದರೂ ಅಂಥಾ ಸಂದರ್ಭದಲ್ಲಿ ದೊರಕಬಹುದಾದ ಅದರ ಕೆಳಗಿನ ಕಮ್ಮೀ ದರದ ಖಚಿತಮಾಡಲ್ಪಟ್ಟ ಸ್ಟ್ಯಾಂಪು ಪ್ರಯೋಗಿಸಲ್ಪಟ್ಟು ಅವಶ್ಯಕವಾದ ಫೀಜ್ ಮೊಬಲಗಿನ ಕಂಭರ್ತೀ ಬಗ್ಯೆ ದೊರಕುವಂಥಾ ಅದರ ಯರಡನೇ ಕಮ್ಮೀ ದರದ ಖಚಿತಮಾಡಲ್ಪಟ್ಟ ವಂದು ಯಾ ಹೆಚ್ಚು ಸಂಖೆಯ ಸ್ಟ್ಯಾಂಪುಗಳು ಪ್ರಯೋಗಿಸಲ್ಪಡತಕ್ಕದ್ದಲ್ಲದೆ ಹತ್ತು ರೂಪಾಯಿಗಳಿಗೆ ಕಮ್ಮೀಯಾದ ಭಿನ್ನಾಂಶವನ್ನು ತೋರಿಸುವ ಬಗ್ಯಾಗಿ ಅಂಟಿಸಲ್ಪಡತಕ್ಕ ಸ್ಟ್ಯಾಂಪು ಪ್ರಯೋಗಿಸಲ್ಪಡತಕ್ಕದ್ದು.

3. ಯರಡನೇ ರೂಲ್ ಅನುಸರಿಸಿ ಪ್ರಯೋಗಿಸಲ್ಪಡುವ ಅಂಟಿಸಲ್ಪಡತಕ್ಕ ಯಾವದಾದರು ಸ್ಟ್ಯಾಂಪುಗಳು ಫೀಜ್ ಮೊಬಲಗು ತೋರಿಸುವದಕ್ಕೆ ಪ್ರಯೋಗಿಸಲ್ಪಟ್ಟ ಕೇವಲ ಜಾಸ್ತಿ ಜಲೆಯುಳ್ಳಂಥಾ ಖಚಿತಮಾಡಲ್ಪಟ್ಟ ಸ್ಟ್ಯಾಂಪಿಗೆ ಅಂಟಿಸಲ್ಪಡತಕ್ಕದ್ದು.

4. ಕೋರ್ಟುಫೀಜ್ ಆಕ್ಟ್ಯು ಅನುಸರಿಸಿ ತೆರಲ್ಪಡಬೇಕಾದ ಫೀಜ್ ಮೊಬಲಗಿಗೋಸ್ಕರ ಯರಡು ಯಾ ಹೆಚ್ಚು ಸಂಖೆಯುಳ್ಳ ಖಚಿತ ಮಾಡೋಣಾದ ಸ್ಟ್ಯಾಂಪುಗಳು ಪ್ರಯೋಗಿಸಲ್ಪಟ್ಟಾಗ ಹಾಗೆ ಪ್ರಯೋಗಿಸಲ್ಪಡುವ ಖಚಿತ ಮಾಡಲ್ಪಟ್ಟ ಪ್ರತಿ ಸ್ಟ್ಯಾಂಪಿನ ಮೇಲೆಯೂ ವ್ಯಾಜ್ಯ ವಿಷಯದ ವಂದು ಭಾಗವು ಬರೆಯಲ್ಪಟ್ಟು, ಸದರೀ ಬರಹವು ಅದು ಬರೆಯಲ್ಪಡುವ ಕಕ್ಷಿಗಾರ ಯಾ ಕಕ್ಷಿಗಾರರ ರುಜುವಿನ ಮೂಲಕ ದೃಢಪಡಿಸಲ್ಪಡತಕ್ಕದ್ದು.

5. ಬಂದು ಫೀಜ್ ಮೊಬಲಗನ್ನು ತೋರಿಸಲ್ಪಡುವ ಬಗ್ಯೆ ಉಪಯೋಗಿಸಲ್ಪಡುವ ಹೆಚ್ಚು ಸಂಖ್ಯೆಯುಳ್ಳ ಖಚಿತಮಾಡಲ್ಪಟ್ಟ ಸ್ಟ್ಯಾಂಪುಗಳು ಖಚಿತಮಾಡೋಣಾದ ಪುಟದಲ್ಲಿ ವ್ಯಾಜ್ಯವಿಷಯ ಯಾವತ್ತೂ ಬರಿಯಲ್ಪಡುವದಕ್ಕೆ ಸ್ಥಳ ಸಾಕಾಗದಿದ್ದರೆ, ವ್ಯಾಜ್ಯ ವಿಷಯವಾದ ಬರವಣಿಗೆ ಪೂರೈಸುವ ಬಗ್ಯೆ ಅವಶ್ಯಕವಾದಷ್ಟು ಖಾಲೀಕಾಗದ ಉಪಯೋಗಿಸಲ್ಪಟ್ಟು ಹಾಗೆ ಖಚಿತಮಾಡಲ್ಪಟ್ಟ ಸ್ಟ್ಯಾಂಪು ಕಾಗದದ ವ ಖಾಲೀಕಾಗದದ ಮೇಲೂ ಇರತಕ್ಕ ಬರಹಗಳು ಅದು ಬರೆಯಲ್ಪಡುವ ಕಕ್ಷಿಗಾರ ಯಾ ಕಕ್ಷಿಗಾರರಿಂದ ರುಜು ಮಾಡುವದರ ಮೂಲಕ ದೃಢಪಡಿಸಲ್ಪಡತಕ್ಕದ್ದು.

6. ವೆಂಡರು, ಅಂಟಿಸಲ್ಪಡತಕ್ಕ ಸ್ಟ್ಯಾಂಪುಗಳಲ್ಲಿರತಕ್ಕ ಖಾಲೀ ಸ್ಥಳದಲ್ಲಿ ಕ್ರಯಕ್ಕೆ ಪಡಕೊಂಡವನ ಹೆಸರು, ಕ್ರಯದ ತಾರೀಖು ಮತ್ತು ಅವನ ವಾಡಿಕೆಯಾದ ರುಜುವು ಸಹ ಮಾಡತಕ್ಕದ್ದು.

7. ಯಾವ ಸಂದರ್ಭದಲ್ಲಾಗಲಿ, ಕೋರ್ಟು ಫೀಜ್ ಆಕ್ಟ್ಯುಅನುಸರಿಸಿ ವಸೂಲ್ಪಡುವ ಫೀಜ್ ಮೊಬಲಗಿನಲ್ಲಿ ವಂದಾಣೆಯ ಭಿನ್ನಾಂಶವು ಪ್ರಾಪ್ತವಾದರೆ ಅಂಥಾ ಭಿನ್ನಾಂಶವು ವಜಾ ಮಾಡಲ್ಪಡತಕ್ಕದ್ದು.——

8. ಮೇಲ್ಕಂಡ ನಿಬಂಧನೆಗಳನುಸರಿಸಿ ಉಪಯೋಗಿಸಲ್ಪಡಬೇಕಾದ ಖಚಿತ ಮಾಡಲ್ಪಟ್ಟ ಸ್ಟ್ಯಾಂಪುಗಳು, ಹಾಲೀ ಜಾರೀಯಲ್ಲಿರತಕ್ಕ ಜನರಲ್ ಸ್ಟ್ಯಾಂಪು ಕಾಗದಗಳ ಹಾಗೇಯೇ ಇರುತ್ತಲ್ಲದೆ ಮೇಲ್ಭಾಗದಲ್ಲಿ "ಮೈಸೂರು ಕೋರ್ಟು ಫೀ" ಯಂಬೀ ಮಾತುಗಳು ಉಂಟೂ ಗಿರುತ್ತೆ.

9. ಈ ನಿಬಂಧನೆಗಳು 1884ನೇ ಇಸವಿ ಏಪ್ರೆಲ್ ಗುರ್ರೇ ಲಾಗಾಯತು ಜಾರೀಲಿ ಬರತಕ್ಕದ್ದು, ಆ ತಾರೀಖು ಮೊದಲು ಹತ್ತು ರೂಪಾಯಿ ಯಾ ಅದಕ್ಕೆ ಮೇಲ್ಪಟ್ಟ ಜೆಲೆಯುಳ್ಳ ಕೋರ್ಟು ಫೀ ಬಾಬತು ಅಂಟಿಸಲ್ಪಡತಕ್ಕ ಲೇಬಿಲ್ಲುಗಳು ಕೊಡಲ್ಪಡ ಕೂಡದು, ಮೊದಲೇ ಕೊಂಡುಕೊಳ್ಳಲ್ಪಟ್ಟ ಅಂಥಾ ಲೇಬಿಲ್‌ಗಳು 1884ನೇ ಇಸವಿ ಏಪ್ರೆಲ್ 30ನೇ ತಾರೀಖಿನ ವರಿಗೆ ಉಪಯೋಗಿಸಲ್ಪಡುವದಕ್ಕೆ ಅಂಗೀಕರಿಸ ಬಹುದು, ಆ ತಾರೀಖು ತರುವಾಯ ಅಂಥಾ ಲೇಬಿಲ್‌ಗಳು ಉಪಯೋಗಿಸಲ್ಪಡ ಕೂಡದು. ಯಲ್ಲ ಸರ್ಕಾರ್ ಖಜಾನೆಗಳಲ್ಲೂ 1884ನೇ ಇಸವೀ ಮೇ 31ನೇ ಮರ್ತುಮಿಗೆ ಮುಂಚಿತವಾಗಿ ಅಂಥಾ ಲೇಬಿಲ್‌ಗಳು ವಾಪಸ್ ಮಾಡಲ್ಪಟ್ಟರೆ ಅವುಗಳ ಕಿಮ್ಮತ್ತು ಕೊಡಲ್ಪಡುವದು.

ಬಮೋಜೇಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.